ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in

ಡಿಎಸ್‌ಇಆರ್‌ಟಿ
DSERT

Phone : 080 - 26422372, 26422373, 26422374,
Fax - 26422377

ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ಕ್ಯು.ಎಂ.ಸಿ/ಶಾಲಾ ಸ್ವಚ್ಛತೆ. 01/2015-16 ದಿನಾಂಕ: 18-05-2015

**ಜ್ಞಾಪನ**

ವಿಷಯ: ಕಛೇರಿ/ಶಾಲೆಗಳಲ್ಲಿನ ಅನುಪಯುಕ್ತ ವಸ್ತುಗಳ ವಿಲೇವಾರಿ ಕುರಿತು.

ಉಲ್ಲೇಖ: 1) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂ: Lok/ps-19/2013-14 ದಿನಾಂಕ 19/11/2013 ಮತ್ತು ಸರ್ಕಾರದ ಪತ್ರ ಸಂ: ಇಡಿ 170 ಮಾಹಿತಿ 2013, ದಿ:06/12/2013.

2) ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ 18-09-2014 ರಂದು ನಡೆದ ಡಿ.ಡಿ.ಪಿ.ಐ/ಡಯಟ್ ಪ್ರಾಂಶುಪಾಲರ ಸಭೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ ಸ್ವಚ್ಚತೆಯನ್ನು ಕಾಪಾಡುವ ಮೂಲಕ ಮಕ್ಕಳ ಕಲಿಕೆಗೆ ಉತ್ತಮವಾದ ಪರಿಸರವನ್ನು ಕಲ್ಪಿಸುವ ನಿಟ್ಟಿನಲ್ಲಿ ಅನುಪಯುಕ್ತ ವಸ್ತುಗಳ ವಿಲೇವಾರಿ ಮಾಡಲು ಸುತ್ತೋಲೆ/ಜ್ಞಾಪನಗಳ ಮೂಲಕ ಕಾಲಕಾಲಕ್ಕೆ ಅನೇಕ ಸೂಚನೆಗಳನ್ನು ನೀಡಲಾಗಿದೆ. ಅದಾಗ್ಯೂ ಭೇಟಿ ನೀಡಿದ ಸಮಯದಲ್ಲಿ ಶಾಲೆಗಳಲ್ಲಿ ಪೂರ್ಣಪ್ರಮಾಣದಲ್ಲಿ ಸ್ವಚ್ಚತೆಯನ್ನು ಕಾಪಾಡದಿರುವುದನ್ನು ಗಮನಿಸಿದೆ. ಉಲ್ಲೇಖ 1 ರಲ್ಲಿನ ಪತ್ರದಲ್ಲಿ ಶಾಲೆಗಳಲ್ಲಿ ಉತ್ತಮ ಕಲಿಕಾ ಪರಿಸರವನ್ನು ಕಲ್ಪಿಸಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲು ಸೂಚನೆ ನೀಡಿದೆ. ಸ್ವಚ್ಚತೆಯನ್ನು ಕಾಪಾಡುವ ಮೂಲಕ ಉತ್ತಮ ಕಲಿಕಾ ಪರಿಸರ ನಿರ್ಮಾಣ ಮಾಡುವುದು ಇಲಾಖೆಯ ಪ್ರಮುಖ ಮತ್ತು ಆದ್ಯ ಜವಾಬ್ದಾರಿಯಾಗಿದೆ. ಈ ಕುರಿತು ಶಾಲೆಗಳಲ್ಲಿ ಸ್ವಚ್ಚತೆಯನ್ನು ಕಾಪಾಡಿ ಕಲಿಕಾ ಪರಿಸರವನ್ನು ಪರಿಣಾಮಕಾರಿಯಾಗಿ ರೂಪಿಸಲು ತಿಳಿಸಿದ್ದರೂ ಬಹುತೇಕ ಶಾಲೆಗಳಲ್ಲಿನ ಮುಖ್ಯಸ್ಥರುಗಳು ನಿರಂತರ ಸ್ವಚ್ಚತೆಯನ್ನು ನಿರ್ವಹಿಸದಿರುವುದು ಹಾಗು ನೀಡಲಾದ ಸೂಚನೆಗಳನ್ನು ಶಿಕ್ಷಣ ಸಂಸ್ಥೆಗಳಲ್ಲಿ ಅನುಷ್ಠಾನ ಮಾಡಿರುವುದಿರುವುದು ವಿಷಾದನೀಯ ಸಂಗತಿಯಾಗಿದೆ. ಉಲ್ಲೇಖದಲ್ಲಿನ ಸೂಚನೆ ಹಾಗು ಸಭೆಯಲ್ಲಿ ಚರ್ಚಿಸಿದಂತೆ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರುಗಳು ಜಿಲ್ಲಾ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿನ ಅನುಪಯುಕ್ತ ವಸ್ತುಗಳನ್ನು ಪಟ್ಟಿ ಮಾಡಿ ಕ್ರಮಬದ್ಧವಾಗಿ ವಿಲೇವಾರಿ ಮಾಡಿ ಸ್ವಚ್ಚಗೊಳಿಸಿ, ಶಾಲೆಗಳನ್ನು ಸ್ವಚ್ಚತೆಯಲ್ಲಿ ಮಾದರಿಯಾಗಿರುವಂತೆ ರೂಪಿಸಲು ಒಂದು ತುರ್ತು ಕಾರ್ಯಯೋಜನೆ ತಯಾರಿಸಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈ ಮೂಲಕ ಸೂಚಿಸಿದೆ.

ಶಾಲೆಗಳಲ್ಲಿ ಗುರುತಿಸಲಾದ ಅನುಪಯುಕ್ತ ಎಲ್ಲಾ ವಸ್ತುಗಳನ್ನು ನಮೂನೆಯಲ್ಲಿ ಪಟ್ಟಿ ಮಾಡಿ ಅದರ ವಿವರಗಳನ್ನು ಶಾಲೆಗಳಲ್ಲಿ ಎಸ್.ಡಿ.ಎಂ.ಸಿಯವರ ಗಮನಕ್ಕೆ ತಂದು ಸಭೆಯಲ್ಲಿ ನಿರ್ಣಯಿಸಿ ಪ್ರಸ್ತುತ ನಿಯಮಗಳ ಅನುಸಾರ ಅನುಪಯುಕ್ತ ಮತ್ತು ಹಾಳಾದ ವಸ್ತುಗಳನ್ನು ಶಾಲೆಗಳಿಂದ ವಿಲೇವಾರಿ ಮಾಡಲು ಕ್ರಮವನ್ನು ಕೈಗೊಳ್ಳುವುದು. ತಾಲ್ಲೂಕು ಹಂತದಲ್ಲಿ ಆಯಾಯಾ ಬಿಇಓಗಳು ಈ ಬಗ್ಗೆ ಕ್ರಮ ಕೈಗೊಂಡು ಸಿದ್ದತೆ ಮಾಡಲು ಕಾರ್‍ಯಕ್ರಮ ರೂಪಿಸಲು ತಿಳಿಸಿದೆ.

ಈ ಪ್ರಕ್ರಿಯೆಯನ್ನು ನಿರಂತರವಾಗಿ ನಿರ್ವಹಿಸಿ ವರ್ಷ ಪೂರ್ತಿ ಶಾಲೆಗಳಲ್ಲಿ ಸ್ವಚ್ಚತೆಯನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು. ಸೂಚನೆ ಅನುಸರಿಸದ ಶಾಲಾ ಮುಖ್ಯಸ್ಥರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ.

**ಈ ಕೆಳಕಂಡ ಅನುಪಯುಕ್ತ ಹಾಗೂ ಹಾಳಾದ ವಸ್ತುಗಳು ಶಾಲೆಗಳಲ್ಲಿರಬಹುದು.**

1. ಮುರಿದಿರುವ ಕುರ್ಚಿ, ಟೇಬಲ್, ಹಲಗೆ, ರ್‍ಯಾಕ್ ಮತ್ತು ಮರದ ಹಳೆ ಪೆಟ್ಟಿಗೆಗಳು
2. ಅನುಪಯುಕ್ತ ಮ್ಯಾಪು, ಚಾರ್ಟ, ಗ್ಲೋಬುಗಳು
3. ಉಪಯೋಗಕ್ಕೆ ಬಾರದೆ ಹಾಳಾದ ಟಿ.ವಿ, ರೇಡಿಯೋ, ಟೇಪ್ ರೆಕಾರ್ಡರ್‌ಗಳು
4. ಉಪಯೋಗಿಸಲು ಬಾರದ ಹಳೆಯ ಕ್ರೀಡಾ ಸಾಮಗ್ರಿಗಳು.
5. ಉಪಯೋಗಕ್ಕೆ ಬಾರದ ಹಳೆಯ ಡಬ್ಬಿಗಳು, ಕಾಗದದ ವಸ್ತುಗಳು, ಪೆಟ್ಟಿಗೆಗಳು.
6. ಹಳೆಯ ಪತ್ರಿಕೆಗಳು (ವಾರ್ತಾ ಪತ್ರಿಕೆಗಳು, ಮ್ಯಾಗಝೀನ್, ಮಕ್ಕಳ ಮನೆಗೆಲಸ ಪುಸ್ತಕಗಳು)
7. ಮಕ್ಕಳ ಕಿರು ಪರೀಕ್ಷೆ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳಲ್ಲಿ ಒಂದು ವರ್ಷದ ಉತ್ತರ ಪತ್ರಿಕೆಗಳನ್ನು ಮಾತ್ರ ಉಳಿಸಿಕೊಂಡು ಉಳಿದ ಎಲ್ಲಾ ವರ್ಷಗಳ ಉತ್ತರ ಪತ್ರಿಕೆಗಳನ್ನು (ನ್ಯಾಯಾಲಯ ಪ್ರಕರಣ ಇಲ್ಲದ ಬಗ್ಗೆ ಖಚಿತ ಪಡಿಸಿಕೊಂಡು) ವಿಲೇವಾರಿ ಮಾಡುವುದು.
8. ಶಾಲಾ ಗೋಡೆಯಲ್ಲಿ ಹಾಕಿರುವ ಹಾಳಾದ ಮತ್ತು ಹರಿದಿರುವ ಮಕ್ಕಳು ಬರೆದಿರುವ ಅಥವಾ ಶಾಲೆಗಳಿಗೆ ಶಿಕ್ಷಕರು ಖರೀದಿಸಿರುವ, ದಾನ ಪಡೆದಿರುವ ಹಾಳಾದ ಚಿತ್ರಪಟಗಳು,
9. ಉಪಯೋಗಕ್ಕೆ ಬಾರದ ಅಡುಗೆ ಪಾತ್ರೆ ಪರಿಕರಗಳು (ಹಳೆಯ ಬಕೇಟು, ಲೋಟ, ಬಾಂಡ್ಲಿ, ತುಕ್ಕು ಹಿಡಿದು ಹಾಳಾಗಿರುವ ಹಳೆ ಬೀಗಗಳು ಹಾಗು ಬೀಗದ ಕೈಗಳು)
10. ಕನ್ನಡ ಮತ್ತು ಆಂಗ್ಲ ಭಾಷೆಯ ಹಳೆಯ ಶಾಲಾ ಸೀಲುಗಳು, ಹಳೆಯ ಇಂಕ್ ಪ್ಯಾಡುಗಳು,
11. ಉಪಯೋಗಕ್ಕೆ ಬಾರದ ಹಿಂದಿನ ಸಾಲಿನಲ್ಲಿ ತಯಾರಿಸಿದ್ದ ಬೋಧನೋಪಕರಣಗಳು, ನಲಿಕಲಿ ವಿಷಯಕ್ಕೆ ಸಂಬಂಧಿಸಿದ ಹಳೆಯದಾದ ಪುಸ್ತಕಗಳು, ಕಾರ್ಡುಗಳು, ಸಾಮಗ್ರಿಗಳು,
12. ಯೋಜನಾ ಕೆಲಸದ ಪುಸ್ತಗಳು ಮಕ್ಕಳ ರಜಾ ರರ್ಜಿಗಳು, ಅಂಕಿ-ಅಂಶ ಸಂಗ್ರಹಣೆ ಮಾಡಿದ ಮೇಲೆ ಉಳಿದ ಹಳೆಯ ಹಾಳೆಗಳು.
13. ಒಡೆದು ಹಾಳಾಗಿರುವ ಟೇಬಲ್ ಗ್ಲಾಸುಗಳು, ಫ್ಲಾಸ್ಕ್ ಗಳು ಇತ್ಯಾದಿ
14. ಅನುಪಯುಕ್ತ ಕಪ್ಪು ಹಲಗೆ, ಸ್ಟ್ಯಾಂಡ್‌ಗಳು, ಫ್ಯಾನ್‌ಗಳು, ವಿದ್ಯುತ್ ಉಪಕರಣಗಳು,
15. ಬಹಳ ವರ್ಷಗಳಿಂದ ಶಾಲೆಯಲ್ಲಿರುವ ಹಳೆಯ ಕ್ಯಾಲೆಂಡರ್, ಹಳೆಯ ಪ್ರಗತಿ ಪತ್ರಿಕೆಗಳು, ಶಾಲಾ ವೇಳಾಪಟ್ಟಿ, ಶಾಲಾ ಫಲಕಗಳು,ಕಸಪೊರಕೆ, ಬಿಂದಿಗೆ,ಟ್ಯೂಬ್‌ಲೈಟ್,ಬಲ್ಬುಗಳು
16. ಗೋಣಿಚೀಲಗಳು, ಸಿಮೆಂಟ್ ಚೀಲಗಳು, ಕಟ್ಟಡ ಕಟ್ಟಿದ ಮೇಲೆ ಉಳಿದಿರುವ ಸಾಮಗ್ರಿಗಳು, ತಂತಿ ಬೇಲಿ ಉಳಿಕೆ ತಂತಿಗಳು ವಿಜ್ಞಾನ ಉಪಕರಣಗಳು ಮತ್ತು ಹಳೆಯ ತುಕ್ಕುಹಿಡಿದ ಪೆಟ್ಟಿಗೆಗಳು, ಪ್ಯಾಕಿಂಗ್ ಸಾಮಗ್ರಿಗಳು, ರಟ್ಟಿನ ಪೆಟ್ಟಿಗೆಗಳು,
17. ಶಾಲಾ ಗ್ರಂಥಾಲಯದಲ್ಲಿರುವ ಹಳೆಯ ಹಾಗೂ ಅನುಪಯುಕ್ತ ಪುಸ್ತಕಗಳು, ತುಂಬಾ ಹಳೆದಾದ ಹಿಂದಿನ ಪಠ್ಯ ಪುಸ್ತಕಗಳು, ಪತ್ರಿಕೆಗಳು, ಚಿತ್ರಪಟಗಳು,
18. ಶಾಲಾ ಪ್ರಯೋಗ ಶಾಲಾ ಗಾಜಿನ ಉಪಕರಣಗಳು, ಬೀಕರುಗಳು, ಅವಧಿ ಮೀರಿದ ರಾಸಾಯನಿಕ ವಸ್ತುಗಳು, ಹಾಳಾದ ಟೆಸ್ಟ್ ಟ್ಯೂಬ್‌ಗಳು,
19. ಹಾಳಾದ ಹಳೆಯ ಸೈನ್ಸ್‌ಕಿಟ್ ಮತ್ತು ಮ್ಯಾತ್ಸ್ ಕಿಟ್‌ಗಳು, ಒಬಿಬಿ ಯಲ್ಲಿ ನೀಡಿದ ಹಾಳಾದ ಉಪಯೋಗಕ್ಕೆ ಬಾರದ ಬೋಧನೋಪಕರಣಗಳು, ಇವುಗಳಲ್ಲದೆ ಯಾವುದಾದರೂ ಅನಗತ್ಯವೆಂದು ಕಂಡು ಬಂದಲ್ಲಿ ತೆಗೆಯುವುದು.

ಶಾಲಾ ತಪಾಸಣೆ;- ಶಾಲಾ ತಪಾಸಣೆಗಳನ್ನು 5 ರಿಂದ 10 ವರ್ಷಗಳಾದರೂ ಮಾಡದೇ ಇರುವುದು, ನಿವೃತ್ತಿ ಮತ್ತು ವರ್ಗಾವಣೆ ಸಂದರ್ಭಗಳಲ್ಲಿ ಮಾತ್ರ ಅವರ ಕೋರಿಕೆಗಳ ಮೇರೆಗೆ ಶಾಲೆಗಳ ತಪಾಸಣೆಯಾಗುತ್ತಿದ್ದು ಇದರಿಂದ ನಿವೃತ್ತ ಸಿಬ್ಬಂದಿಗಳ

ನಿವೃತ್ತಿ ಸೌಲಭ್ಯಗಳನ್ನು ಸಕಾಲದಲ್ಲಿ ಇತ್ಯರ್ಥಗೊಳಿಸಲು ಸಾಧ್ಯವಾಗದೇ ಇರುವುದು ಕಂಡು ಬಂದಿದೆ. ಇನ್ನು ಮುಂದೆ ತಾಲ್ಲೂಕು/ಬ್ಲಾಕ್ ವ್ಯಾಪ್ತಿಯಲ್ಲಿನ ಶಾಲೆಗಳನ್ನು ಕನಿಷ್ಟ ಎರಡು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಶಾಲಾ ವಾರ್ಷಿಕ ತಪಾಸಣೆಯನ್ನು ನಡೆಸಿ ತಪಾಸಣಾ ವರದಿ ನೀಡುವುದು ಬಿ.ಇ.ಒಗಳ ಜವಾಬ್ದಾರಿಯಾಗಿದೆ. ತಪ್ಪಿದಲ್ಲಿ ಇಲಾಖಾ ಶಿಕ್ಷಕರಿಗೆ ಆಗುವ ತೊಂದರೆಗಳಿಗೆ ಹಾಗು ಅದರ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಬಿ.ಇ.ಒ ಗಳನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಲಾಗುವುದು ಎಂದು ಕಟ್ಟು ನಿಟ್ಟಾಗಿ ತಿಳಿಸಿದೆ.

(ಮೊಹಮ್ಮದ್ ಮೊಹಸಿನ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

<u>ಗೆ,</u>

1) ಉಪನಿರ್ದೇಶಕರು/ಡಯಟ್ ಪ್ರಾಂಶುಪಾಲರು,
2) ಬಿ.ಇ.ಓ, ಬಿ.ಆರ್.ಸಿಗಳು.

ಪ್ರತಿಯನ್ನು ಮಾಹಿತಿಗಾಗಿ:

1) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು
2) ನಿರ್ದೇಶಕರು, ಪ್ರೌಢಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು
3) ನಿರ್ದೇಶಕರು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ(ಪರೀಕ್ಷೆಗಳು)
4) ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ(ಇತರೆ ಪರೀಕ್ಷೆಗಳು)
5) ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
6) ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
7) ನಿರ್ದೇಶಕರು, ಸಿಸ್ಲೆಪ್, ಧಾರವಾಡ
8) ನಿರ್ದೇಶಕರು, ಭಾಷಾ ಅಲ್ಪಸಂಖ್ಯಾತರು, ಆಯುಕ್ತರ ಕಛೇರಿ, ಬೆಂಗಳೂರು